ಸಾಕ್ಷಿಯನ್ನು ದಿಃ **04.01.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಡಿ.ಎ.ವಕೀಲರಿಂದಃ-

ವಾದಿ ಹಾಕಿರುವ ಈ ದಾವಾಕ್ಕೆ ನನ್ನ ಸಮ್ಮತಿ ಕೂಡ ಇದೆ ಎಂದರೆ ಸರಿಯಲ್ಲ. ಈ ದಾವಾ ಹಾಕುವ ಪೂರ್ವದಲ್ಲಿ ವಾದಿ ನನ್ನ ಜೊತೆ ಮಾತುಕತೆ ಆಡಿದ್ದರು ಎಂದರೆ ಸರಿಯಲ್ಲ. ಯಾವುದೇ ಕ್ರಯಪತ್ರ, ದಾನಾಪತ್ರ, ವಿಲ್ ಇತ್ಯಾದಿ ದಾಖಲೆಗಳನ್ನು ಮಾಡುವಾಗ ಸದರಿ ದಾಖಲೆಗಳನ್ನು ಬರೆದುಕೊಡುವವರು ಅಲ್ಲಿ ಹಾಜರಿರಬೇಕು ಎಂದರೆ ಇರಬಹುದು. ಈ ರೀತಿ ದಾಖಲೆಗಳನ್ನು ನೋಂದಣಿ ಮಾಡಿಸುವಾಗ ಸ್ವತ್ತುಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಡ ನೋಂದಣಾಧಿಕಾರಿಗಳ ಮುಂದೆ ಹಾಜರುಪಡಿಸಬೇಕು ಎಂದರೆ ಸರಿ. ನೋಂದಣಾಧಿಕಾರಿ ಯವರ ಕಚೇರಿಯಲ್ಲಿ ದಾಖಲೆ ಬರೆದುಕೊಡುವವರ ಫೋಟೋ ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ವಿಲ್ ಆಧಾರದ ಮೇಲೆ ನನಗೂ ಕೂಡ ಸುಮಾರು ಸ್ವತ್ತುಗಳು ಬಂದಿವೆ. ಸದರಿ ಸ್ವತ್ತುಗಳಲ್ಲಿ ನಾನು ಸ್ವಾಧೀನದಲ್ಲಿದ್ದೇನೆ ಎಂದರೆ ಸರಿ. ಸದರಿ ವಿಲ್ ಪ್ರಕಾರ ನನ್ನ ಹೆಸರಿಗೆ ಒಟ್ಟು ಎಷ್ಟು ಸ್ವತ್ತುಗಳು ಬಂದಿವೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಅಂದಾಜು 8 ರಿಂದ 10 ಎಕರೆ ಬಂದಿರಬಹುದು. ನನ್ನ ಸಹೋದರನಾದ 2 ನೇ ಪ್ರತಿವಾದಿಗೂ ಸುಮಾರು 8-10 ಎಕರೆ ಬಂದಿರಬಹುದು. ಅದೇ ರೀತಿ ಸದರಿ ವಿಲ್ ಪ್ರಕಾರ 3 ನೇ ಪ್ರತಿವಾದಿಗೆ ಎಷ್ಟು ಸ್ವತ್ತು ಹೋಗಿವೆ ಎಂದರೆ, ನಮ್ಮ ತಂದೆ ಯಾವುದೇ ವಿಲ್ ಬರೆದಿಲ್ಲ, ಅದನ್ನು 2 ಮತ್ತು 3 ನೇ ಪ್ರತಿವಾದಿಗಳು ಸೃಷ್ಟಿ ಮಾಡಿದ್ದಾರೆ, ನಮ್ಮ ತಂದೆಗೆ ವಿಲ್ ಮಾಡುವ ಅಧಿಕಾರ ಕೂಡ ಇರಲಿಲ್ಲ, ಅವೆಲ್ಲ ಪಿತ್ರಾರ್ಜಿತ ಆಸ್ತಿಗಳಾಗಿವೆ. ವಿಲ್ ಬಗ್ಗೆ ನನ್ನ ತಂದೆ ನನ್ನೊಂದಿಗೆ ಯಾವತ್ತೂ ಮಾತನಾಡಿರಲಿಲ್ಲ, ಅವರಿಗೆ ವಿಲ್ ಬರೆಯುವ ಉದ್ದೇಶವು ಇರಲಿಲ್ಲ. ವಿಲ್ ಬರೆದಿಟ್ಟಿದ್ದೇನೆ ಎಂದು ನನ್ನ ತಂದೆ ನನ್ನ ಬಳಿ ಹೇಳಿದ್ದರು ಎಂದರೆ ಸರಿಯಲ್ಲ, ಅವರು ವಿಲ್ ಬರೆದಿಲ್ಲ. ಅದೇ ರೀತಿ ನಾನು ವಿಲ್ ಮಾಡಿಲ್ಲ ಎಂದು ನಮ್ಮ ತಂದೆ ಯಾರ ಬಳಿಯಾದರೂ ಹೇಳಿದ್ದಾರಾ ಎಂದರೆ ನನಗೆ ಗೊತ್ತಿಲ್ಲ.

ಉಪ-ನೋಂದಣಾಧಿಕಾರಿಗಳ ಸಮಕ್ಷಮ ನನ್ನ ತಂದೆ ಖುದ್ದು ವಿಲ್ ಬರೆಸಿ ಅದನ್ನು ನೋಂದಣಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಯಾವುದಾದರೂ ಒಬ್ಬ ವ್ಯಕ್ತಿಗೆ ಸಹಿ ಮಾಡಲು ಕೈ ನಡುಗುತ್ತಿದ್ದರೆ ಅವರು ಹೆಬ್ಬೆಟ್ಟಿನ ಸಹಿ ಮಾಡಲು ಅವಕಾಶ ಇದೆ ಎಂದರೆ, ಕೈ ಹಿಡಿದುಕೊಂಡು ಹೆಬ್ಬೆಟ್ಟು ಒತ್ತಿಸಲು ಸಹ ಅವಕಾಶ ಇದೆ ಎನ್ನುತ್ತಾರೆ. ಒಬ್ಬ ಸಕ್ಷಮ ಅಧಿಕಾರಿ ಮುಂದೆ ಒಬ್ಬರ ಬೆರಳನ್ನು ಹಿಡಿದು ಇನ್ನೊಬ್ಬರು ಹಿಡಿದು ಹೆಬ್ಬೆಟ್ಟಿನ ಸಹಿ ಒತ್ತಿಸಿಕೊಳ್ಳಲು ಅವಕಾಶ ಇಲ್ಲ ಎಂದರೆ ಸರಿಯಲ್ಲ, ಅಧಿಕಾರಿಗಳು ಏನು ಬೇಕಾದರೂ ಮಾಡುತ್ತಾರೆ. ನಾನು ವಿಲ್‌ನ್ನು ಪ್ರಶ್ನೆ ಮಾಡಿ ಲಿಖಿತವಾಗಿ ಉಪತಹಶೀಲ್ದಾರರಿಗೆ ಅರ್ಜಿ ಕೊಟ್ಟಿದ್ದೆ ಎಂದು ಹೇಳಿದ್ದು, ಅವರು ನನ್ನ ತಕರಾರನ್ನು ಪರಿಗಣಿಸಿಲ್ಲ ಎಂಬ ಬಗ್ಗೆ ಅವರ ಮೇಲಾಧಿಕಾರಿಗಳಿಗೆ ನಾನು ದೂರು ಅರ್ಜಿ ನೀಡಿದ್ದೇನಾ ಎಂದರೆ ಆ ರೀತಿ ಮುಂದುವರಿಯುವಷ್ಟರಲ್ಲಿ ಈ ದಾವೆ ಹೂಡಿದ್ದರು, ಆದ್ದರಿಂದ ಆ ದಿಕ್ಕಿನಲ್ಲಿ ಮುಂದುವರೆದಿರುವುದಿಲ್ಲ. ವಿಲ್ ಆದ ಮೂರು ವರ್ಷಗಳ ನಂತರ ಈ ದಾವೆ ಹೂಡಲಾಗಿದೆ ಎಂದರೆ ಅದೇ ಸಂದರ್ಭದಲ್ಲಿ ನಮಗೆ ಗೊತ್ತಾಗಿತ್ತು. ನಾನು ಅಸವಾಳು ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದೆ ಎಂದು ಹೇಳಿದ್ದು ಆ ಸಂದರ್ಭಗಳಲ್ಲಿ ನಾನು ದಾಖಲೆಗಳನ್ನು ಪರಿಶೀಲಿಸುತ್ತಿದ್ದೆ ಮತ್ತು ವಿಲ್ ವಿಚಾರ ನನ್ನ ಗಮನಕ್ಕೂ ಬಂದಿತ್ತು ಮತ್ತು ಅದಕ್ಕೆ ನನ್ನ ಸಮ್ಮತಿ ಕೂಡ ಇತ್ತು ಎಂದರೆ ಸರಿಯಲ್ಲ.

ನಾನು ಪ್ರತಿ ವರ್ಷ ನಮ್ಮ ಸ್ವತ್ತಿನ ರೆವಿನ್ಯೂ ದಾಖಲೆಗಳನ್ನು ತೆಗೆಸಿ ನೋಡುತ್ತಿರುತ್ತೇನೆ ಎಂದರೆ ಪ್ರತಿವರ್ಷ ನೋಡುವುದಿಲ್ಲ. ಸಾಲ ತೆಗೆದುಕೊಳ್ಳಲು, ಗೊಬ್ಬರ ತೆಗೆದುಕೊಳ್ಳಲು, ರೈತರಿಗೆ ಸರ್ಕಾರದಿಂದ ನೀಡುವ ಯಾವುದಾದರೂ ಸೌಲಭ್ಯಗಳನ್ನು ಪಡೆದುಕೊಳ್ಳಲು ರೆವಿನ್ಯೂ ದಾಖಲೆಗಳನ್ನು ತೋರಿಸಬೇಕಾಗುತ್ತದೆ ಎಂದರೆ ನಾನು ಗೊಬ್ಬರ ಅಂತ ಸೌಲಭ್ಯಗಳನ್ನು ಯಾವುದು ಪಡೆದುಕೊಂಡಿಲ್ಲ ಸೊಸೈಟಿಯಲ್ಲಿ ಒಮ್ಮೆ ಮಾತ್ರ ಸಾಲ ಪಡೆದುಕೊಂಡಿದ್ದೆ, ಆದ್ದರಿಂದ ನನಗೆ ಗೊತ್ತಿಲ್ಲ. ನಾನು ಆ ಸಾಲವನ್ನು ಪಡೆದುಕೊಂಡು ಸುಮಾರು ವರ್ಷವಾಯಿತು. ಯಾವ ವರ್ಷ ಎಂದು ನೆನಪಿಲ್ಲ. ಸೊಸೈಟಿಯಲ್ಲಿ ಪ್ರತಿವರ್ಷ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುತ್ತಾರೆ ಎಂದರೆ ಸರಿ. ವಿಲ್ ಆಧಾರದ ಮೇಲೆ 3 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿದೆ ಎಂದರೆ ನಮ್ಮ ತಂದೆ ವಿಲ್ ಬರೆದಿಲ್ಲ 2 ಮತ್ತು 3 ನೇ ಪ್ರತಿವಾದಿಯರು

ಶಾಮೀಲಾಗಿ ಸೃಷ್ಟಿಸಿಕೊಂಡಿರುವ ವಿಲ್ ಆಧಾರದ ಮೇಲೆ ಖಾತೆ ಆಗಿದೆ. 3 ನೇ ಪ್ರತಿವಾದಿ ಸ್ವಾಧೀನದ ಸ್ವತ್ತುಗಳ ಅನುಭವಕ್ಕೆ ತೊಂದರೆ ಕೊಡುತ್ತಿದ್ದೇವೆ ಎಂದು ನನ್ನ ಮತ್ತು ವಾದಿಯ ವಿರುದ್ಧ 3 ನೇ ಪ್ರತಿವಾದಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಹುಣಸೂರು ಇಲ್ಲಿ ಡಿಕ್ಲರೇಷನ್ ಮತ್ತು ಇಂಜಂಕ್ಷನ್ ದಾವೆ ಹೂಡಿದ್ದಾರೆ ಎಂದರೆ ಸರಿ. ನಮ್ಮ ತಂದೆ ಅವರ ಸ್ವಯಾರ್ಜಿತ ಸ್ವತ್ತುಗಳ ಬಗ್ಗೆ ವಿಲ್ ಮಾಡಿದ್ದಾರೆ ಎಂದರೆ ಸರಿಯಲ್ಲ, ಅವರಿಗೆ ಯಾವುದೇ ಸ್ವಯಾರ್ಜಿತ ಸ್ವತ್ತು ಇರಲಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.